ಮಂದನಗೊಜ್ಜಿಗೆ ಹೇಗೆ ಬಂದಿರಬಹುದೆಂದು ಯೋಚಿಸುತ್ತಾ ಚಪ್ಪರಿಸಿದಳು. ಹಮೀದನ ಹೋಟೆಲ್ಲಿನ ಫಿಶ್ ಫ್ರೈ ಉರ್ಮಿಗೆ ಹಿಡಿಸೀತೆಂದು ಪುಟ್ಟ ತಮಾಷೆ ಮಾಡಿದ. ಉರ್ಮಿಯ ಕಣ್ಣುಗಳು ಅರಳಿದವು. ಪುಟ್ಟನ ಅಮ್ಮ ಗಾಬರಿಯಿಂದ ಇಬ್ಬರ ಮುಖವನ್ನೂ ನೋಡಿದರು.

ಮತ್ತೆ ಸಂಜೆ ಪುಟ್ಟನ ಸಖ ಮನೆಗೆ ಬಂದು ಮೇಲಿನ ಕೇರಿಗೆ ಉರ್ಮಿಯನ್ನು ಆಹ್ವಾನಿಸಿದ. ಉರ್ಮಿ ಲಘುಬಗೆಯಿಂದ ತಯಾರಾದಳು. ಪುಟ್ಟನೂ ಅವರ ಜತೆ ನಡೆದ. ಅಲ್ಲಿನ ಕೆಲವು ಮನೆಗಳಿಗೆ ಕೆಳಗಿನ ಕೇರಿಯದರಷ್ಟೇ ಡಿಕಾವಿತ್ತು. ಹೆಚ್ಚಿನ ಮನೆಗಳು ಇತ್ತೀಚೆಗೆ ತಲೆಯೆತ್ತಿ ಇನ್ನೂ ಪೂರ್ಣಗೊಳ್ಳದೇ ನಿಂತಿದ್ದವು. ಹಲವು ಮನೆಗಳ ಎದುರಿಗೆ ಎತ್ತರದ ಅಡಿಕೆಸಿಪ್ಪೆಯ ರಾಶಿ ಬಿದ್ದಿತ್ತು. ಉರ್ಮಿ ಮೇಲಿನಕೇರಿಯವರೂ ಅಡಿಕೆ ಬೆಳೆಗಾರರಿರಬಹುದೆಂದು ಊಹಿಸಿದಳು. ಪುಟ್ಟನ ಸಖ, ಅವರೆಲ್ಲಾ ಕೃಷಿ ಕೆಲಸದಲ್ಲಿ ಪರಿಣಿತರು ಮತ್ತು ಬೇರೆ-ಬೇರೆ ಊರುಗಳಿಂದ ಹಸಿಯಡಕೆಯನ್ನು ಮನೆಗೆ ತರಿಸಿ ಸುಲಿದು ಹದ ಮಾಡಿಕೊಡುತ್ತಾರೆಂದ. ಹೊಸ ತಲೆಮಾರಿನ ಹುಡುಗರು ಅಲ್ಲಿ ಹೆಚ್ಚು ಕಾಣಲಿಲ್ಲ. ಕೆಲವು ಮನೆಗಳ ಮುಂದೆ ಲಗೇಜ್ ಕ್ಯಾರಿಯರ್ ವಾಹನಗಳು, ಆಟೋ ರಿಕ್ಷಾಗಳು ನಿಂತಿದ್ದವು. ಎಲ್ಲೋ ಒಂದೋ ಎರಡೋ ಸಣ್ಣ ಶೆಡ್ಡಿನ ಮನೆಗಳೂ ಇದ್ದವು. ಉರ್ಮಿಗೆ ಅಲ್ಲಿನವರ ಅಡುಗೆಯ ರುಚಿ ನೋಡಬೇಕೆನಿಸಿತ್ತು. ಆದರೆ ಮೇಲಿನ ಕೇರಿಯವರು ಆ ಮೂವರನ್ನು ಆತ್ಮೀಯವಾಗಿ ಮಾತನಾಡಿಸಿದರೂ ಮನೆಗೆ ಕರೆಯದೇ ರಸ್ತೆಯಲ್ಲೇ ಬೀಳ್ಕೊಡುತ್ತಿದ್ದರು. ಪುಟ್ಟನ ಸಖ ಮೇಲಿನ ಕೇರಿಯ ಹಲವು ಮನೆಗಳ ಜತೆಗೆ ಹೊಕ್ಕು ಬಳಕೆಯವನಾಗಿದ್ದ. ಅದೇ ಸಲುಗೆಯಲ್ಲಿ ಒಂದಿಬ್ಬರ ಮನೆಯೊಳಗೆ ಹೋದರೂ ಅಲ್ಲಿ ನೀರು, ಹಾಲು ಮತ್ತು ಬಾಳೆಹಣ್ಣಿನ ಹೊರತಾಗಿ ಅವರಿಗೆ ಬೇರೇನೂ ದಕ್ಕಲಿಲ್ಲ. ಪುಟ್ಟನ ಸಖ ಬಾಯಿಬಿಟ್ಟು ಕೇಳಿದರೂ ನಿಮ್ಮವರಿಗೆ ಹೇಗೆ ನಮ್ಮವರ ಊಟ ಹಿಡಿಸೀತು ಎಂದು ರಾಗ ಎಳೆದು ಕಳುಹಿಸಿದ್ದರು. ಮೇಲಿನ ಕೇರಿಯ ತುದಿಗೆ ದೊಡ್ಡ ಮರದ ಬುಡದಲ್ಲಿ ಸಣ್ಣ ಗುಡಿಯೊಂದಿತ್ತು. ಅಲ್ಲಿ ಹಣತೆಯೊಂದು ಸಣ್ಣಕ್ಕೆ ಉರಿಯುತ್ತಿತ್ತು.

ಆ ದಿನ ರಾತ್ರಿ ಊಟದ ನಂತರ ಉರ್ಮಿ ತನ್ನ ಮೊಬೈಲ್‌ಗೆ ಕಣ್ಣುಕೊಟ್ಟು ಹಮೀದನ ಹೋಟೆಲ್ಲು, ಕೋಳಿ ಕಜ್ಜಾಯ, ಕಾಯಿ ಕಡುಬು, ತೊಡೆದೇವು ಹೀಗೆ ಮಲೆನಾಡಿನ ಬಗೆಬಗೆಯ ತಿನಿಸುಗಳ ರೀಲ್ ನೋಡುತ್ತಾ ಹಾಸಿಗೆಯಲ್ಲಿ ಒರಗಿದ್ದಳು. ಆ ಊರಲ್ಲಿ ತಾನು ನೋಡಲುಳಿದಿರುವುದು ಆಹಾರದ ಸವಿ ಮಾತ್ರ ಎಂದು ಯೋಚಿಸುತ್ತಿದ್ದಳು. ನೀವೆಲ್ಲಾ ಅಪರೂಪಕ್ಕೆ ಊರಿಗೆ ಬಂದು

